**2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಹಾಸನ,**

**ಎಲ್.ಎ.ಸಿ ಅಪೀಲು ಸಂಖ್ಯೆ–530/2025**

ಎ.ಡಬ್ಲ್ಯೂ– 1

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕಃ 04–06–2026**

**ಮಧ್ಯಂತರ ಅರ್ಜಿ 1ರ ಮೇಲಿನ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ**

ಸಾಕ್ಷಿದಾರರು ಮಧ್ಯಂತರ ಅರ್ಜಿ 1ರ ಮೇಲೆ ತಮ್ಮ ಮುಖ್ಯ ವಿಚಾರಣೆಯಾಗಿ ಪ್ರಮಾಣಪತ್ರವನ್ನು ಸಲ್ಲಿಸಿರುತ್ತಾರೆ.

**ಪಾಟೀಸವಾಲುಃ 1 ಹಾಗೂ 2ನೇ ಎದುರುದಾರರ ಪರ ಡಿಜಿಪಿ ರವರಿಂದ**

ಮುಳುಗಡೆಯಾದ ನನ್ನ ಮನೆಗೆ ಪರಿಹಾರವನ್ನು 10 ಸಾವಿರ ರೂ.ಗಳನ್ನು 26 ಅಥವಾ 28 ವರ್ಷಗಳ ಹಿಂದೆ ಪಡೆದುಕೊಂಡಿರುತ್ತೇನೆ. ಬಳಿಕ ನ್ಯಾಯಾಲಯಕ್ಕೆ ಸದರಿ ಪರಿಹಾರದ ವಿರುದ್ಧ ಎಲ್ ಎ ಸಿ ನಂ.278/2002 ರಂತೆ ಅರ್ಜಿ ಸಲ್ಲಿಸಿದ್ದು ಸದರಿ ಪ್ರಕರಣದಲ್ಲಿ ನ್ಯಾಯಾಲಯ ನನ್ನ ಮನೆಗೆ ಒಟ್ಟು ಪರಿಹಾರ ಹಣ ಎಷ್ಟು ನೀಡಿ ಆದೇಶಿಸಿತ್ತು ಎಂದು ನನಗೆ ಮಾಹಿತಿ ಇರುವುದಿಲ್ಲ. ನಾನು ನ್ಯಾಯಾಲಯಕ್ಕೆ ಹಾಜರಾಗಿ ಸಾಕ್ಷ್ಯವನ್ನು ನೀಡಿದ್ದೆನು. ಸದರಿ ಎಲ್ ಎ ಸಿ ಪ್ರಕರಣದಲ್ಲಿ ಹಾಸನ ನ್ಯಾಯಾಲಯಕ್ಕೆ ಹಾಜರಾಗಿ ನಾನೇ ಖುದ್ದಾಗಿ ಸಾಕ್ಷ್ಯವನ್ನು ನೀಡಿದ್ದೇನೆ. ಆ ರೀತಿ ಪರಿಹಾರ ಹಣವನ್ನು ಆದೇಶಿಸಿದ್ದು ಕಡಿಮೆ ಆಯಿತು ಎಂದು ಮೇಲ್ಮನವಿ ಸಲ್ಲಿಸಲು ನನ್ನ ವಕೀಲರಿಗೆ ತಿಳಿಸಿದ್ದೆ, ಆದರೆ ಅವರು ಸಲ್ಲಿಸಿದ್ದಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ನನ್ನ ಆರೋಗ್ಯ ಸರಿ ಇರುವುದಿಲ್ಲ ಎಂಬ ಬಗ್ಗೆ ನ್ಯಾಯಾಲಯಕ್ಕೆ ಯಾವುದೇ ವೈದ್ಯಕೀಯ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಕೋವಿಡ್ ಇದ್ದ ಕಾರಣ ಅಪೀಲು

ಸಲ್ಲಿಸಿರುವುದಿಲ್ಲ ಎಂದು ಸುಳ್ಳು ಸಾಕ್ಷ್ಯ ಹೇಳಿದ್ದು ಕೋವಿಡ್ ಮುಗಿದ್ದು ಈಗಾಗಲೇ 5 ವರ್ಷಗಳು ಆಗಿದೆ ಎಂದು ಸೂಚಿಸುವುದು ಸರಿಯಲ್ಲ. ಸದರಿ ಎಲ್ ಎ ಸಿ ಪ್ರಕರಣದಲ್ಲಿ ಸೂಕ್ತ ಪರಿಹಾರ ನೀಡಿ ಆದೇಶ ಆಗಿದ್ದರೂ ಸಹ ವಿನಾಕಾರಣ ಸುಳ್ಳು ಪ್ರಕರಣವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಮ್ಮ ಪಕ್ಕದ ಸ್ವತ್ತಿಗೆ ಸಂಬಂಧಿಸಿದಂತೆ ಹೆಚ್ಚಿನ ಪರಿಹಾರ ನೀಡಿದ್ದಾರೆ ಎಂದು ನನ್ನ ಅರ್ಜಿಯಲ್ಲಿ ಹಾಗೂ ಪ್ರಮಾಣಪತ್ರದಲ್ಲಿ ಹೇಳಿದ್ದು ಅದಕ್ಕೆ ಸಂಬಂಧಿಸಿದಂತೆ ಪಕ್ಕದ ಸ್ವತ್ತಿನವರು ಪರಿಹಾರ ಪಡೆದ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಪಕ್ಕದ ಸ್ವತ್ತಿನ ಪ್ರಕರಣದ ಸಂಗತಿಗಳು ಹಾಗೂ ನಾನು ಹಾಕಿದ ಪ್ರಕರಣದ ಸಂಗತಿಗಳು ಬೇರೆ ಬೇರೆ ಇದ್ದು ತಾಳೆಯಾಗುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ, ಎಲ್ಲಾ ಒಂದೆ. ನಾನು ಯಾವುದೇ ಸಕಾರಣಗಳನ್ನು ಸಾಕ್ಷಿ ಪ್ರಮಾಣಪತ್ರದಲ್ಲಿ ಹಾಗೂ ಅರ್ಜಿಯಲ್ಲಿ ತಿಳಿಸದೆ ಸುಳ್ಳು ಪ್ರಕರಣ ಹಾಗೂ ಸುಳ್ಳು ಸಾಕ್ಷ್ಯ ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ.

2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್
ನ್ಯಾಯಾಧೀಶರು, ಹಾಸನ.